ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.42/2023

| | | | |
|---|---|---|---|
| ಹೆಸರು | : | ಹನುಮಂತರಾಜು | ಸಿ .ಡಬ್ಲ್ಯೂ :3 |
| ತಂದೆ ಹೆಸರು | : | ಲೇಟ್ ಮೂಡಲಯ್ಯ | ಪಿ .ಡಬ್ಲ್ಯೂ 3 |
| ವಯಸ್ಸು | : | 53 ವರ್ಷ | |
| ಉದ್ಯೋಗ | : | ಮರಗೆಲಸ | |
| ವಾಸಸ್ಥಳ | : | ಜಯನಗರ, ತುಮಕೂರು . | |

ಸಾಕ್ಷಿಯನ್ನು ದಿಃ 11-08-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ -1, 2 ಮತ್ತು 4 ಗೊತ್ತು . 1 ರಿಂದ 4 ನೇ ಆರೋಪಿತರುಗಳನ್ನು ನೋಡಿದ್ದೇನೆ .

ದಿಃ 04-12-2022 ರಂದು ನಿಟ್ಟೂರಿನ ಚಾಸಾ -1 ರವರ ತೋಟದಲ್ಲಿ ಗಲಾಟೆ ನಡೆಯುತ್ತಿತ್ತು . ಚಾಸಾ -1 ರವರು ತೋಟಕ್ಕೆ ನೀರು ಹಾಯಿಸಿದ್ದರು . ಆರೋಪಿತರುಗಳು ತೋಟದ ಒಳಗೆ ಟ್ರ್ಯಾಕ್ಟರ್ ಚಲಾಯಿಸಲು ಬಂದರು . ಆ ಸಮಯ ಚಾಸಾ -1 ರವರು ಈಗ ತೋಟಕ್ಕೆ ನೀರು ಹಾಯಿಸಿದ್ದೇನೆ , ಅದು ಒಣಗಿನ ನಂತರ ಟ್ರ್ಯಾಕ್ಟರ್ ಚಲಾಯಿಸಿ ಎಂದು ಹೇಳಿದರು . ಆಗ ಆರೋಪಿತರುಗಳು ಚಾಸಾ -1 ರವರ ಮೇಲೆ ಹಲ್ಲೆ ಮಾಡಿದ್ದಾರೆ . ಆಗ ಸಮಯ ಬೆಳಗ್ಗೆ 8.30 ಗಂಟೆಯಾಗಿತ್ತು .2 ನೇ ಆರೋಪಿತರು ದೊಣ್ಣೆಯೊಂದರಿಂದ ಚಾಸಾ -1 ರವರ ತಲೆಯ ಹಿಂಭಾಗಕ್ಕೆ ಹಲ್ಲೆ ಮಾಡಿದರು .1,3 ಮತ್ತು 4 ನೇ ಆರೋಪಿತರುಗಳು 2 ನೇ ಆರೋಪಿತರಿಗೆ ಏನಾಗುತ್ತದೆಯೋ ನೋಡೋಣಾ ಅವರನ್ನು ಬಾವಿಗೆ ಹಾಕಿ ಎಂದು ಹೇಳುತ್ತಿದ್ದರು . ನಾನು ಮತ್ತು ಚಾಸಾ -2 ರವರು ಗಲಾಟೆ ಬಿಡಿಸಿದೆವು . ಮೇಲಿನ ವಿಚಾರಗಳನ್ನು ತಿಳಿಸಿ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ . ಗಲಾಟೆಯ ಸಮಯ 1, 3 ಮತ್ತು 4 ನೇ ಆರೋಪಿತರುಗಳು ಚಾಸಾ -1 ರವರಿಗೆ ಕೈಗಳಿಂದ ಬೆನ್ನಿನ ಮೇಲೆ ಗುದ್ದಿದ್ದರು .

ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಮು ಮಾ -1 ನ್ನು ನೋಡಿ ಗುರುತಿಸಿದ್ದಾರೆ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

ಪಾಟೀಸವಾಲುಃ ಸ ಸ ಅ ರವರಿಂದಃ-

ಗಲಾಟೆಯ ಸಮಯ ಆರೋಪಿತರುಗಳು ಚಾಸಾ -1 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದರೆ ಸರಿ .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನಾನು ಚಾಸಾ -1 ರವರ ಮನೆಯ ವಧುವನ್ನು ವಿವಾಹವಾಗಿದ್ದೇನೆ ಎಂದರೆ ಸರಿ . ಚಾಸಾ -2, 4 ಮತ್ತು 5 ರವರು ಚಾಸಾ -1 ರವರ ಸಂಬಂಧಿಕರು ಎಂದರೆ ಸರಿ .

ಮೇಲೆ ಹೇಳಿದ ದಿನಾಂಕದಂದು ಬೆಳಗ್ಗೆ 7.00 ಗಂಟೆಗೆ ನಮ್ಮ ಗ್ರಾಮದಿಂದ ಹೊರಟಿದ್ದೆ . ನಿಟ್ಟೂರಿಗೆ ಬಂದಾಗ ಬೆಳಗ್ಗೆ 8.00 ಗಂಟೆಯಾಗಿತ್ತು . ಅಡಿಕೆ ಖರೀದಿಯ ಸಲುವಾಗಿ ಚಾಸಾ -1 ರವರನ್ನು ಕರೆದುಕೊಂಡು ಹೋಗಲು ಅವರ ತೋಟದ ಬಳಿ ಬಂದಿದ್ದೆ . ಸದರಿ ದಿನಾಂಕದಂದು ನಾನು ಹೇಳಿದಂತಹ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರುಗಳು ಯಾವ ನೋಂದಣಿ ಸಂಖ್ಯೆಯ ಟ್ರ್ಯಾಕ್ಟರ್ ನಲ್ಲಿ ಬಂದಿದ್ದರು ಎಂದು ಗೊತ್ತಿಲ್ಲ . ನಾನು ಹೇಳುವಂತೆ ಆರೋಪಿತರುಗಳು ಚಾಸಾ -1 ರವರಿಗೆ ಹಲ್ಲೆ ಮಾಡಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿತರು ಚಾಸಾ -1 ರವರಿಗೆ ಮು ಮಾ -1 ರಿಂದ ಹಲ್ಲೆ ಮಾಡಿಲ್ಲ , 1,3 ಮತ್ತು 4 ನೇ ಆರೋಪಿತರುಗಳು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ 1, 3 ಮತ್ತು 4 ನೇ ಆರೋಪಿತರುಗಳು 2 ನೇ ಆರೋಪಿತರಿಗೆ ಏನಾಗುತ್ತದೆಯೋ ನೋಡೋಣಾ ಅವರನ್ನು ಬಾವಿಗೆ ಹಾಕು ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಜಮೀನಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ತಿಳಿದಿಲ್ಲ. ಮು ಮಾ -1 ರಂತಹ ಕಾಡು ದೊಣ್ಣೆ ಎಲ್ಲಾ ಕಡೆ ಲಭ್ಯವಾಗುತ್ತದೆ ಎಂದರೆ ಸರಿ . ನಾನು ಹೇಳುವಂತೆ ಆ ದಿನ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ -1 ರವರ ಸಂಬಂಧಿಯಾಗಿರುವ ಕಾರಣ ಅವರಿಗೆ ಈ ಪ್ರಕರಣದಲ್ಲಿ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಟ್ಟೂರಿನಲ್ಲಿ ಚಾಸಾ -1 ರವರಿಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ, ರುದ್ರಾಣಮ್ಮ ಎಂಬುವವರ ಹೆಸರಿನಲ್ಲಿ ಸದರಿ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಚಾಸಾ -1 ರವರೇ ಆರೋಪಿತರುಗಳಿಗೆ ಓಡಾಡಲು ಸ್ಥಳವಕಾಶ ನೀಡದೆ ತೊಂದರೆ ನೀಡಿದ್ದಾರೆ ಎಂದರೆ ಸರಿಯಲ್ಲ. ಚಾಸಾ -1 ಮತ್ತು ಆರೋಪಿತರುಗಳು ಸೋದರ ಸಂಬಂಧಿಗಳು ಎಂದರೆ ಸರಿ . ಜಮೀನಿನ ವಿಚಾರವಾಗಿ ಅವರುಗಳ ನಡುವೆ ಮನಸ್ತಾಪ ಇದೆ ಎಂದರೆ ಸರಿ . ಅದೇ ಕಾರಣದಿಂದ ಚಾಸಾ -1 ರವರು ಆರೋಪಿತರುಗಳ ವಿರುದ್ದ ಸುಳ್ಳು ವಿವರಗಳ ದೂರು ನೀಡಿದ್ದಾರೆ ಎಂದರೆ ಸರಿಯಲ್ಲ.

ಚಾಸಾ -1 ರ ಬಳಿ ಮೋಟರ್ ಸೈಕಲ್ ಇದೆ ಎಂದರೆ ಸರಿಯಲ್ಲ. ಬೈಸಿಕಲ್ ಇದೆ ಎಂದು ಸಾಕ್ಷಿ ಹೇಳಿದ್ದಾರೆ . ಚಾಸಾ -1 ರವರು ಬೈಸಿಕಲ್ ನಲ್ಲಿ ಹೋಗುವಾಗ ತಲೆಗೆ ಗಾಯ ಮಾಡಿಕೊಂಡು ಆರೋಪಿತರುಗಳು ಹಲ್ಲೆ ಮಾಡಿದ್ದಾರೆ ಎಂದು ಪ್ರಕರಣವೊಂದನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರುಗಳು ಅತಿಕ್ರಮ ಪ್ರವೇಶ ಮಾಡಿಲ್ಲ , ಚಾಸಾ -1 ರವರ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ , ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ , ಜೀವ ಬೆದರಿಕೆ ಒಡ್ಡಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರುಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.